O.S. ನಂಬರಃ 47/2017
ಪಿ. ಡಬ್ಲ್ಯೂಃ 3

ದಿಃ 05–12–2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ</u> 1ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಸ್.ಯು.ಎ ಇವರಿಂದಃ

ಇಂದು ನೀವು ಯಾವ ಕ್ರಿಮಿನಲ್ ಪ್ರಕರಣದಲ್ಲಿ ಬಂದಿರುತ್ತೀರಿ ಎಂದರೆ ಸಾಕ್ಷಿಯು ಇಂದು ನಾನು ಯಾವುದೇ ಕ್ರಿಮಿನಲ್ ಪ್ರಕರಣಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಖಾಸಗಿ ಶಿಕ್ಷಕರು ಆಗಿರುವ ಕಾಲೇಜು ಸರಕಾರಿ ಕೆಲಸದ ಅವಧಿಯಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ವಾರಕ್ಕೆ 4 ದಿನಗಳಿಗೆ ಮಾತ್ರ ಹಾಜರಾಗುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಮನೆಯಿಂದ ನೀವು ಕೆಲಸ ಮಾಡುವಂತಹ ಕಾಲೇಜು ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು ಸುಮಾರು 136 ಕಿ.ಮೀ ದೂರವಾಗುತ್ತದೆ ಎಂದು ನುಡಿಯುತ್ತಾರೆ. 136 ಕಿ.ಮೀ ಎಂದರೆ ದೂರದ ಪ್ರಯಾಣ ಇರುವ ಕಾರಣ ನೀವು ಬೆಳಿಗ್ಗೆ ಬೇಗೆ ಹೋಗಿ ಸಂಜೆ ಬರುವಷ್ಟರಲ್ಲಿ 6 ಗಂಟೆಯಾಗಿರುತ್ತದೆ ಎಂದರೆ ಸರಿ. ಒಂದೊಂದು ಬಾರಿ 7 ಗಂಟೆಯಾಗುತ್ತದೆ ಎಂದರೆ ಸರಿ. ನಾನು ಖಾಸಗಿ ಶಿಕ್ಷಕನಾಗಿ 22 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನು. ಈ ಪ್ರಕರಣದ ವಾದಿಯರು ಹಾಗೂ ನೀವು ಒಂದೇ ಸಮಾಜದವರು ಎಂದರೆ ಸರಿ. ಇಂದು ನ್ಯಾಯಾಲಯಕ್ಕೆ ಬಂದಿರುವ ಪಿ ಡಬ್ಲ್ಯೂ–2 ಬೊಮ್ಮ ಮಾಣು ಗೌಡ ನಿಮಗೆ

ಪರಿಚಯಸ್ಥರು ಎಂದರೆ ಸರಿ. ಪ್ರಕರಣ ದಾಖಲಾದ ನಂತರ ಪರಿಚಯವಾಗಿರುತ್ತದೆ. ನೀವು ಶಿಕ್ಷಕರು ಆಗಿದ್ದರಿಂದ ಮನೆಗೆ ಬಂದ ನಂತರವೂ ಸಹ ಮುಂದಿನ ಬೋಧನೆ ಬಗ್ಗೆ ತಯಾರಿ ಮಾಡಿಕೊಳ್ಳಬೇಕಾಗುತ್ತದೆ ಎಂದರೆ ಸರಿ. ನಿಮ್ಮ ಮನೆಯಿಂದ ವಾದಿಯರ ಮನೆಯು ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು ರಸ್ತೆಯಿದ್ದ ಬಂದರೆ 5 ಕಿ.ಮೀ ಆಗುತ್ತದೆ ಹಾಗೂ ಗುಡ್ಡದಿಂದ ಬಂದರೆ 2 ಕಿ.ಮೀ ಆಗುತ್ತದೆ ಎಂದು ನುಡಿಯುತ್ತಾರೆ. ನೀವು ರಸ್ತೆಯಿಂದ ಬರಬೇಕಾಗದರೆ ನಿಮ್ಮ ಸಮಾಜದವರಿಗೆ ಸೇರಿದ ಜಮೀನುಗಳ ಸರ್ವೆ ನಂಬರು ಹಾಗೂ ಅದರ ಕಬ್ಜೆದಾರರು ಯಾರು ಇರುತ್ತಾರೆ ಎಂದು ನಮಗೆ ಗೊತ್ತಿರುವುದಿಲ್ಲ ಎಂದರೆ ಸರಿ. ವಾದಿಯರು ಹೇಳಿಕೆಯ ಮೇರೆಗೆ ನೀವು ಇಂದು ಸಾಕ್ಷಿಯನ್ನು ನುಡಿಯಲು ಬಂದಿರುತ್ತೀರಿ ಎಂದರೆ ಸರಿ. ಅವರು ತಮ್ಮ ವಕೀಲರು ಇಂತವರು ಎಂದೂ ಸಹ ಹೇಳಿರುತ್ತಾರೆ ಎಂದರೆ ಸಾಕ್ಷಿಯು ಅವರು ಹೇಳಿರುವುದಿಲ್ಲ, ನನಗೆ ಆ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

2. ವಾದಿಯರು ಯಾವ ಸ್ವರೂಪದ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಹೇಳಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿಯರಲ್ಲಿ ಯಾರಿಗೆ ಓದು ಬರಹ ಬರುತ್ತದೆ ಎಂದರೆ ಸಾಕ್ಷಿಯು ಯಾರಿಗೂ ಸಹ ಬರುವುದಿಲ್ಲ ಎಂದು ನುಡಿಯುತ್ತಾರೆ. 3ನೇ ವಾದಿಗೆ ಓದು ಬರಹ ಬರುತ್ತಿದ್ದು, ಕನ್ನಡದಲ್ಲಿ ಸಹಿ ಹಾಕುತ್ತಾಳೆ ಎಂದರೆ ಸಾಕ್ಷಿಯು ಸಹಿ ಹಾಕಲು ಮಾತ್ರ ಬರುತ್ತದೆ ಎಂದು ನುಡಿಯುತ್ತಾರೆ. ದಾವಾಕ್ಕೆ ಒಳಪಟ್ಟ ಸರ್ವೆ ನಂಬರಿನ ಕ್ಷೇತ್ರ ಎಷ್ಟು ಇರುತ್ತದೆ ಎಂಬ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ಇರುವುದಿಲ್ಲ,

ಅವರ ಜಾಗವನ್ನು ಮಾತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. 2ನೇ ವಾದಿಯ ಮನೆಯ ಪಕ್ಕದಲ್ಲಿ ಗ್ರಾಮ ಚಾವಡಿ ಇರುತ್ತದೆ ಎಂದರೆ ಸರಿಯಲ್ಲ. ದೂರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಮೂಲ ದಾವಾ ನಂ. 45/2017 ರಲ್ಲಿ ಗ್ರಾಮ ಚಾವಡಿಯು ಅವರ ಮನೆಯ ಹತ್ತಿರ ಇದೆ ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿಯು ಹತ್ತಿರದಲ್ಲಿ ಇರುವುದಿಲ್ಲ, ದುೂರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಗ್ರಾಮ ಚಾವಡಿ ಎಂದು ಎಲ್ಲರಿಗೂ ಸಹ ಗೊತ್ತಾಗುವಂತೆ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಿಳಿದವರಿಗೆ ಮಾತ್ರ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. 3 ಜನ ವಾದಿಯರಿಗೆ ಅದು ಸರಕಾರಿ ಕಚೇರಿ, ಗ್ರಾಮ ಚಾವಡಿ ಎಂದು ತಿಳಿದುಕೊಳ್ಳದೇ ಇರುವಷ್ಟು ದಡ್ಡರು ಇರುವುದಿಲ್ಲ ಎಂದರೆ ಸಾಕ್ಷಿಯು ಅವರಿಗೆ ಆ ನಂತರ ಗೊತ್ತಾಗಿದ್ದು, ನಂತರ ಹುಡುಕಿಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಅವರೇ ಹೇಳಿರುತ್ತಾರೆ. ಗ್ರಾಮ ಚಾವಡಿಯು ವಾದಿಯರ ಮನೆಯಿಂದ ಕಣ್ಣಳತೆಯಷ್ಟು ದೂರ ಇದ್ದರೂ ಸಹ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಗ್ರಾಮ ಚಾವಡಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು, ಉಗ್ರಾಣಿ, ಗ್ರಾಮ ಸಹಾಯಕರು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿಯು ಅವರು ಇರುತ್ತಾರೆ ಎಂದು ಕೇಳಿರುತ್ತೇನೆ, ಆದರೆ ಎಷ್ಟು ಜನ ಇರುತ್ತಾರೆ ಎಂದು ಗೊತ್ತಿರುವುದಿಲ್ಲ. ಗ್ರಾಮ ಚಾವಡಿ ಕಚೇರಿಯು ಜಮೀನುಗಳ ದಾಖಲಾತಿಗಳಿಗೆ ಸಂಬಂಧಪಟ್ಟ ಕಚೇರಿಯಾಗಿತ್ತದೆ ಎಂದರೆ ಸರಿ. ವಾದಿಯರಿಗೆ ಗ್ರಾಮ ಚಾವಡಿಯು ಸರಕಾರಿ ದಾಖಲಾತಿಗಳಿಗೆ ಸಂಬಂಧಪಟ್ಟ ಕಚೇರಿ ಎಂದು ಗೊತ್ತಿದ್ದರೂ ಸಹ ಅವರಿಗೆ ಗೊತ್ತಿರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯರ ಬಗ್ಗೆ ನಿಮಗೆ ಜಾಸ್ತಿ ಕಾಳಜಿ ಇರುತ್ತದೆ ಎಂದರೆ ಸಾಕ್ಷಿಯು ಕಾಳಜಿ ಇರುವುದಿಲ್ಲ, ಆಸ್ತಿಯನ್ನು ಕಳೆದುಕೊಂಡಿದ್ದರ ಬಗ್ಗೆ ದುಃಖ ಇರುತ್ತದೆ ಎಂದು ನುಡಿಯುತ್ತಾರೆ. ವಾದಿಯರು ನಿಮ್ಮ ತಂದೆಯ ಕಾಲದಿಂದಲೂ ಬಹಳ ಪರಿಚಯಸ್ಥರು ಎಂದರೆ ಸರಿ. ವಾದಿಯರು ಆಸ್ತಿಯ ಕಬ್ಜೆಯನ್ನು ಮಾಡಿದ್ದರೆ ರಸ್ತೆಯಲ್ಲಿ ಹೋಗುವವರಿಗೆ ಕಾಣಿಸುತ್ತದೆ ಎಂದರೆ ಸರಿ. ಇವತ್ತು ನಿಮ್ಮ ಜೊತೆಗೆ ಬಂದ ಪಿ ಡಬ್ಲ್ಯೂ-2 ರವರು ಒಟ್ಟಿಗೆ ಬಂದಿರುತ್ತೀರಿ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

3. ವಾದಿಯರೇ ಸ್ವತಃ ವಕೀಲರ ಕಚೇರಿಗೆ ಹೋಗಿ ದಾವಾ ಆಸ್ತಿಗಳಿಗೆ ಸಂಬಂಧಪಟ್ಟು 1 ನೇ ಪ್ರತಿವಾದಿಗೆ ಮಾಡಿಕೊಟ್ಟಂತಹ ದಾಖಲಾತಿಯ ಮುಖಾಂತರ 2ನೇ ಪ್ರತಿವಾದಿಗೆ ಹೋಗಿರುತ್ತವೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಹೆಸರಿಗೆ ಇದ್ದ ದಾಖಲಾತಿಯನ್ನು ಏನಾದರೂ ತೋರಿಸಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 2ನೆ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಗಳು ಹೇಗೆ ದಾಖಲಾಗಿರುತ್ತವೆ ಎಂದು ವಾದಿಯರನ್ನಾಗಲಿ ಅಥವಾ ಅವರ ವಕೀಲರನ್ನಾಗಲಿ ಕೇಳಿ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಕೇಳಿದ ನಂತರ ಇಂತ ಇಂತಹ ದಾಖಲಾತಿಗಳು ಎಂದು ಏನಾದರೂ ತೋರಿಸಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿಯರು ನಿಮ್ಮ ಸಮುದಾಯದವರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಯರ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

2ನೇ ಪ್ರತಿವಾದಿಯ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಕೋರಿಕೊಂಡಿದ್ದು, ಅದರಂತೆ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

C/c. ಸಿವಿಲ್ ನ್ಯಾಯಾಧೀಶರು, ಅಂಕೋಲಾ.